**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,</u>**
**<u>ಸಿಂದಗಿ.</u>**

# <u>ಸಿ.ಸಿ.ನಂ.1640/2024</u>

**ಫಿರ್ಯಾದಿ :** **ಕರ್ನಾಟಕ ರಾಜ್ಯ (ದೇವರ ಹಿಪ್ಪರಗಿ ಪೊಲೀಸರಿಂದ)**

**<u>- ವಿರುದ್ಧ -</u>**

**ಆರೋಪಿತರು:**

1) ಯಮನಪ್ಪ ತಂ. ಯಲ್ಲಪ್ಪ ಹರಿಜನ
ಸಾಃ ಇಂಗಳಗಿ ಗ್ರಾಮ, ತಾ: ದೇವರಹಿಪ್ಪರಗಿ.

2) ಮಹಂತೇಶ ತಂ.ಯಮನಪ್ಪ ಹರಿಜನ
ಸಾಃ ಇಂಗಳಗಿ ಗ್ರಾಮ, ತಾ: ದೇವರಹಿಪ್ಪರಗಿ.

3) ಶ್ರೀಕಾಂತ ತಂ.ಯಮನಪ್ಪ ಹರಿಜನ
ಸಾಃ ಇಂಗಳಗಿ ಗ್ರಾಮ, ತಾ: ದೇವರಹಿಪ್ಪರಗಿ.

4) ಸಂತೋಷ ತಂ.ಯಮನಪ್ಪ ಹರಿಜನ
ಸಾಃ ಇಂಗಳಗಿ ಗ್ರಾಮ, ತಾ: ದೇವರಹಿಪ್ಪರಗಿ.

5) ರಾವುತ್ತಪ್ಪ ತಂ. ಶಂಕ್ರೆಪ್ಪಾ ಹರಿಜನ
ಸಾಃ ಇಂಗಳಗಿ ಗ್ರಾಮ, ತಾ: ದೇವರಹಿಪ್ಪರಗಿ.

6) ಶಿವಾನಂದ ತಂ. ಶಂಕ್ರೆಪ್ಪಾ ಹರಿಜನ
ಸಾಃ ಇಂಗಳಗಿ ಗ್ರಾಮ, ತಾ: ದೇವರಹಿಪ್ಪರಗಿ.

7) ಭೀಮಪ್ಪ ತಂ. ಶಂಕ್ರೆಪ್ಪಾ ಹರಿಜನ
ಸಾಃ ಇಂಗಳಗಿ ಗ್ರಾಮ, ತಾ: ದೇವರಹಿಪ್ಪರಗಿ.

8) ರಾಮಪ್ಪ ತಂ. ಶಂಕ್ರೆಪ್ಪ ಹರಿಜನ
ಸಾಃ ಇಂಗಳಗಿ ಗ್ರಾಮ, ತಾ: ದೇವರಹಿಪ್ಪರಗಿ.

9) ಮೀನಾಕ್ಷಿ ಗಂ. ಯಮನಪ್ಪ ಹರಿಜನ
ಸಾಃ ಇಂಗಳಗಿ ಗ್ರಾಮ, ತಾ: ದೇವರಹಿಪ್ಪರಗಿ.

10) ರಾಜಕ್ಕ @ ರಾಜೇಶ್ವರಿ ಭೀಮಪ್ಪ ಹರಿಜನ
ಸಾಃ ಇಂಗಳಗಿ ಗ್ರಾಮ, ತಾ: ದೇವರಹಿಪ್ಪರಗಿ.

11) ಲಕ್ಷ್ಮೀ ಗಂ. ಮಹಂತೇಶ ಹರಿಜನ
ಸಾಃ ಇಂಗಳಗಿ ಗ್ರಾಮ, ತಾ: ದೇವರಹಿಪ್ಪರಗಿ.

12) ಮರೆವ್ವ ತಂ. ರಾಮಪ್ಪ ಹರಿಜನ
ಸಾಃ ಇಂಗಳಗಿ ಗ್ರಾಮ, ತಾ: ದೇವರಹಿಪ್ಪರಗಿ.

13) ಮಲ್ಲವ್ವ ಗಂ. ರಾವುತಪ್ಪ ಹರಿಜನ
ಸಾಃ ಇಂಗಳಗಿ ಗ್ರಾಮ, ತಾ: ದೇವರಹಿಪ್ಪರಗಿ.

**ದೋ ಷಾ ರೋ ಪ ಣೆ**

**ನಾನು ಶ್ರೀಮತಿ ಪಂಕಜಾ ಕೊಣ್ಣೂರ**, ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಸಿಂದಗಿ, ಆದ ನಾನು, ಮೇಲ್ಕಂಡ ಆರೋಪಿತರಾ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ.

ದಿನಾಂಕ 05.07.2023 ರಂದು ಮುಂಜಾನೆ 10.30 ಗಂಟೆ ಸುಮಾರಿಗೆ ದೇವರಹಿಪ್ಪರಗಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಇಂಗಳಗಿ ಗ್ರಾಮದ ಸರ್ವೆ ನಂ.142/2 ರಲ್ಲಿ ಸಾಕ್ಷಿ-01 ಹಾಗೂ ಗಾಯಾಳು ಸಾಕ್ಷಿ-04 ಹಾಗೂ 05 ರವರು ಕೂಡಿಕೊಂಡು ತಮ್ಮ ಹೊಲ ಬಿತ್ತಲು ಸಾಕ್ಷಿ-06 ರವರ ಬಿತ್ತು ಟ್ರ್ಯಾಕ್ಟರ್ ತೆಗೆದುಕೊಂಡು ಇಂಗಳಗಿ ಗ್ರಾಮದ ಸರ್ವೆ ನಂ: 142/2 ರ ತಮ್ಮ ಜಮೀನಿಗೆ ಹೋದಾಗ, ನೀವು 1 ರಿಂದ 13 ಆರೋಪಿಗಳು ಕೂಡಿಕೊಂಡು ಹಲ್ಲೆ ಮಾಡುವ ಏಕೊದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಬಂದಿದ್ದು, ಆ ಮೂಲಕ ಭಾ.ದಂ.ಸಂಹೀತೆ ಕಲಂ 143 ಸಹಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

2. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 13 ನೇ ಆರೋಪಿತರಾದ ನೀವು ನಿಮ್ಮ ಏಕೋದ್ದೇಶದ ಈಡೇರಿಕೆಗಾಗಿ ಅಕ್ರಮ ಕೂಟ ಕಟ್ಟಿಕೊಂಡು ಬಂದು ದೊಂಬಿ ಎಬ್ಬಿಸಿದ್ದು, ಆ ಮೂಲಕ ಭಾ.ದಂ.ಸಂಹೀತೆ ಕಲಂ 147 ಸಹಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

3. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 13 ನೇ ಆರೋಪಿತರಾದ ನೀವು ಹೊಲ ಸರ್ವೆ ನಂ.142/2 ರಲ್ಲಿ ಅತೀಕ್ರಮ ಪ್ರವೇಶ ಮಾಡಿ, ಆ ಮೂಲಕ ಭಾ.ದಂ.ಸಂಹೀತೆ ಕಲಂ 447 ಸಹಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತಿರಿ.

4. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 13 ನೇ ಆರೋಪಿತರಾದ ನೀವು ನಿಮ್ಮ ಏಕೋದ್ದೇಶದ ಈಡೇರಿಕೆಗಾಗಿ ಅಕ್ರಮ ಕೂಟ ಕಟ್ಟಿಕೊಂಡು ಬಂದು, ಎ-01 ಈತನು ಸಾಕ್ಷಿ-04 ಇವರ ರಟ್ಟೆ ಹಿಡಿದು ಎಳೆದು ದಬ್ಬಿದ್ದು, ಎ-09 ಇವಳು ಅಲ್ಲಿ ಬಿದ್ದಿರುವ ಬಡಿಗೆಯಿಂದ ಸಾಕ್ಷಿ-04 ಇವಳಕ್ಕೆ ಗೆ ಹೊಡೆದಳು ಆಗ ಸಾಕ್ಷಿ-01 ಈತನು ಆಕೆಗೆ ಯಾಕ್ ಹೊಡೆತಿ ಅಂತಾ ಕೇಳಿದಕ್ಕೆ ಎಲ್ಲರೂ ಕೂಡಿಕೊಂಡು ಬೈಯುತ್ತಾ ಸಾಕ್ಷಿ-01 ರವರಿಗೆ ಹೊಡೆಯಲು ಹೋಗಿದ್ದು, ಅದರಲ್ಲಿ ಎ-03 ಈತನು ಮೀನಾಕ್ಷಿ ಕೈಯಲ್ಲಿನ ಬಡಿಗೆ ಕಸಿದುಕೊಂಡು ಸಾಕ್ಷಿ-01 ಈತನ ಡುಬ್ಬಕ್ಕೆ ಹೊಡೆದಿದ್ದು, ಬಿಡಿಸಲು ಹೋದ ಸಾಕ್ಷಿ-05 ಈತನಿಗೆ ಎ-05 ಈತನು ಕೈಯಿಂದ ಹೊಡಿಬಡಿ ಮಾಡಿ ಗಾಯ ಪಡಿಸಿರುತ್ತೀರಿ, ಆ ಮೂಲಕ ಭಾ.ದಂ.ಸಂಹೀತೆ ಕಲಂ 323 ಮತ್ತು 324 ಸಹಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

5. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 13 ನೇ ಆರೋಪಿತರಾದ ನೀವು ನಿಮ್ಮ ಏಕೋದ್ದೇಶದ ಈಡೇರಿಕೆಗಾಗಿ ಅಕ್ರಮ ಕೂಟ ಕಟ್ಟಿಕೊಂಡು ಬಂದು, ಸಾಕ್ಷಿ-04 ಇವರು ಇದು ನಮ್ಮ ಹೊಲ ಆದ, ನಾವು ಬಿತ್ತತಿವಿ ಅಂದಿದ್ದಕ್ಕೆ ಸಿಟ್ಟಾಗಿ ಆರೋಪಿತರುಗಳಾದ ಎ-01 ರಿಂದ ಎ-13 ರವರು ಅವಾಚ್ಯ ಶಬ್ದಗಳಿಂದ ಬೈಯ್ದು, ಆ ಮೂಲಕ ಭಾ.ದಂ.ಸಂಹೀತೆ ಕಲಂ 504 ಸಹಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

6. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, *1* ರಿಂದ *13* ನೇ ಆರೋಪಿತರಾದ ನೀವು ನಿಮ್ಮ ಏಕೋದ್ದೇಶದ ಈಡೇರಿಕೆಗಾಗಿ ಅಕ್ರಮ ಕೂಟ ಕಟ್ಟಿಕೊಂಡು ಬಂದು, ಜಗಳ ತೆಗೆದು, ಅವಾಚ್ಯ ಶಬ್ದಗಳಿಂದ ಬೈಯ್ದು, ನೀವು ಆರೋಪಿತರೆಲ್ಲೂ ಹೋಗುವಾಗ ಇವತ್ತ ಉಳಿದಿರಿ ಮಕ್ಕಳ್ಳಾ ಈ ಹೊಲದ ಕಡೆ ಇನ್ನೊಮ್ಮೆ ಬಂದ್ರು ನಿಮಗೆ ಜೀವ ಸಹಿತ ಬಿಡುವುದಿಲ್ಲ, ಅಂತಾ ಜೀವದ ಬೆದರಿಕೆ ಹಾಕಿರುತ್ತೀರಿ, ಆ ಮೂಲಕ ಭಾ.ದಂ.ಸಂಹೀತೆ ಕಲಂ *506* ಸಹ ಕಲಂ

*149* ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತಿರಿ.

ನೀವು ಮೇಲೆ ಹೇಳಿದ ಅಪಾದನೆಗೆ ಈ ನ್ಯಾಯಾಲಯದ ಮುಂದೆ ನೀವು ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತೇನೆ.

## ಆರೋಪಿಗಳ ಹೇಳಿಕೆ

ಪ್ರಶ್ನೆ-1: ಈಗ ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ ಆರೋಪಣೆಯನ್ನು ಅರ್ಥಮಾಡಿಕೊಂಡಿದಿರಾ?

ಉ : 1 ರಿಂದ 13 ನೇ ಆರೋಪಿತರು -

ಪ್ರಶ್ನೆ -2 : ಆರೋಪಣೆಯನ್ನು ಒಪ್ಪುವಿರಾ ಅಥವಾ ವಿಚಾರಣೆ ನಡೆಸಬೇಕೆ?

ಉ : 1 ರಿಂದ 13 ನೇ ಆರೋಪಿತರು -

(ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲೆ ಕೊಟ್ಟಂತಹ ಹೇಳಿಕೆಗಳು ಆರೋಪಿತರ ನಿಜವಾದ ಹೇಳಿಕೆಗಳಿರುತ್ತವೆಂದು ಪ್ರಮಾಣಿಕರಿಸಲಾಗಿದೆ)

ದಿನಾಂಕ: 07-08-2025

**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸಿಂದಗಿ.**